ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಭಾರತೀಯ ಹವಾಮಾನ ಇಲಾಖೆ

**ಗ್ರಾಮೀಣ ಕೃಷಿ ಹವಾಮಾನ ಸೇವಾ**

**ಕೃಷಿ ಹವಾಮಾನ ಕ್ಷೇತ್ರ ವಿಭಾಗ(IMD)**

**ನಾಗನಹಳ್ಳಿ, ಮೈಸೂರು 570 003**

ದಿನಾಂಕ: 08-06-2021

## ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಮೈಸೂರು ಜಿಲ್ಲೆಯ ಹವಾಮಾನ ಮತ್ತು ಕೃಷಿ ಕಾರ್ಯಕ್ರಮಗಳ ವರದಿ ಪತ್ರಿಕೆ

### ಹವಾಮಾನದ ಮುನ್ಸೂಚನೆ

| Parameters | 09.06.2021 | 10.06.2021 | 11.06.2021 | 12.06.2021 | 13.06.2021 |
|---|---|---|---|---|---|
| ಮಳೆ (ಮಿ.ಮೀ) | 0 | 6 | 11 | 12 | 12 |
| ಗರಿಷ್ಠ ಉಷ್ಣಾಂಶ (°C) | 33 | 31 | 30 | 30 | 29 |
| ಕನಿಷ್ಠ ಉಷ್ಣಾಂಶ (°C) | 22 | 21 | 21 | 20 | 20 |
| ಮೋಡ (ಆಕ್ಟ್ಸ್) | 3 | 3 | 5 | 5 | 5 |
| ಗರಿಷ್ಠ ಗಾಳಿಯ ತೇವಾಂಶ (%) | 84 | 84 | 86 | 87 | 87 |
| ಕನಿಷ್ಠ ಗಾಳಿಯ ತೇವಾಂಶ (%) | 71 | 71 | 74 | 74 | 74 |
| ಗಾಳಿಯ ವೇಗ (ಕಿ.ಮೀ/ಗಂಟೆ) | 2 | 3 | 4 | 5 | 5 |
| ಗಾಳಿಯ ದಿಕ್ಕು (ಡಿಗ್ರಿ) | 248 | 248 | 248 | 248 | 248 |

ಭಾರತೀಯ ಹವಾಮಾನ ಇಲಾಖೆಯ ಪ್ರಕಾರ ಈ ವಾರದ ಮುನ್ಸೂಚನೆ, ಮೈಸೂರು ಜಿಲ್ಲೆಯಲ್ಲಿ ದಿನಾಂಕ: 09–06–2021 ರಿಂದ 13–06–2021 ರವರೆಗೆ ಮೋಡಕವಿದ ವಾತಾವರಣವಿರಲಿದ್ದು ತುಂತುರುವಿನಿಂದ ಸಾಧಾರಣದ ಮಳೆ ಬರುವ ಸಾಧ್ಯತೆ ಇದೆ. ಗರಿಷ್ಠ ಉಷ್ಣಾಂಶ 29–33°C ಮತ್ತು ಕನಿಷ್ಠ ಉಷ್ಣಾಂಶ 20–22°C ವರೆಗೆ ದಾಖಲಾಗುವ ಸಾಧ್ಯತೆಯಿದೆ. ಬೆಳಗಿನ ಗಾಳಿಯ ತೇವಾಂಶ ಶೇಕಡ 84–87% ವರೆಗೆ ಮತ್ತು ಮಧ್ಯಾಹ್ನದ ತೇವಾಂಶ ಶೇಕಡ 71–74% ಮತ್ತು ಗಾಳಿಯು ಗಂಟೆಗೆ ಸರಾಸರಿ 2–5 ಕಿಲೋಮೀಟರ್ ವೇಗದಲ್ಲಿ ಬೀಸುವ ಸಾಧ್ಯತೆಯಿದೆ. **ದೀರ್ಘಾವಧಿ ಹವಾಮಾನ ಮುನ್ಸೂಚನೆಯ ಪ್ರಕಾರ ದಿನಾಂಕ 04.06.2021 ರಿಂದ ದಿನಾಂಕ 17.06.2021 ರವರೆಗೆ ಸರಾಸರಿಗಿಂತ ಹೆಚ್ಚು ಮಳೆಯಾಗುವ ಸಂಭವವವಿದೆ ಎಂದು ಭಾರತೀಯ ಹವಾಮಾನ ಇಲಾಖೆ ತಿಳಿಸಿದೆ.**

### ಕೃಷಿ ಚಟುವಟಿಕೆಗಳ ಬಗ್ಗೆ ಅನುಸರಿಸಬಹುದಾದ ವಿವರ

| ಬೆಳೆ/ ಜಾನುವಾರಗಳು | ಹಂತ | ರೋಗ ಮತ್ತು ಕೀಟ | ಕೃಷಿ ಸಲಹೆಗಳು |
|---|---|---|---|
| ✓ ಈ ಭಾರಿ (ಉತ್ತಮ ಮಳೆ) ವಾಡಿಕೆ ಮಳೆ ಶೇ 97ರಷ್ಟು ಬರುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (IMD) ಮುನ್ಸಚನೆ ನೀಡಿದೆ. ಆದ್ದರಿಂದ ರೈತರು ಆತಂಕಕ್ಕೆ ಒಳಗಾಗುವ ಅವಶ್ಯಕತೆ ಇಲ್ಲ. | | | |

**ರೈತರು ಜೂನ್ ತಿಂಗಳಿನಲ್ಲಿ ಬಿತ್ತನೆ ಮಾಡುಬಹುದಾದ ಬೆಳೆಗಳು ಮತ್ತು ತಳಿಗಳು**

- **ಭತ್ತ:** ಜಯ, ಬಿ.ಆರ್.–2655, ಮಂಡ್ಯ ವಿಜಯ ಪ್ರಕಾಶ. ಐ.ಇ.ಟಿ–8116
- **ರಾಗಿ:** ಇಂಡಾಫ್–8, ಎಮ್.ಆರ್.–1, ಮತ್ತು 6, ಎಲ್–5, ಎಮ್.ಎಲ್.–365.ಕೆ ಎಮ್ ಆರ್–301, ಎಂ.ಎಲ್–365
- **ಸೂರ್ಯಕಾಂತಿ:** ಮಾರ್ಡೆನ್, ಹೈಬ್ರಿಡ್ ತಳಿ–ಕೆ.ಬಿ.ಎಸ್.ಹೆಚ್–1
- **ಶಕ್ತಿಮಾನ್ ಮುಸುಕಿನ ಜೋಳ:** ಹೈಬ್ರಿಡ್ ಹೇಮ, ನಿತ್ಯಶ್ರೀ, ಕಾಂಪೋಸಿಟ್ (ಎನ್.ಎ.ಸಿ) 6004 ಮತ್ತು ಎನ್.ಎ.ಸಿ–6002
- **ತೃಣಧಾನ್ಯಗಳು: ಶಕ್ತಿಮಾನ್** ಸಜ್ಜೆ– ಡಬ್ಲ್ಯೂ ಸಿಸಿ 75, ಕೆ.ಹೆಚ್.ವಿ.ಬಿ–910
- **ನವಣೆ:** ಆರ್ .ಎಸ್–118, ಕೆ.221–1, ಪಿ.ಎಸ್–4, ಎಸ್.ಐ.ಎ–326.
- **ಕಬ್ಬು:** ಸಿ.ಒ–62175, ಸಿ.ಒ–419, ಸಿ.ಒ–7804, ಸಿ.ಒ–86032, ಸಿ.ಓ.ಸಿ–671
- **ತರಕಾರಿ ಬೆಳೆಗಳು:** ಟೊಮ್ಯಾಟೊ, ಬದನೆ, ಮೆಣಸಿನಕಾಯಿ, ಎಲೆಕೋಸು, ಮೂಲಂಗಿ, ಈರುಳ್ಳಿ, ಹುರುಳಿಕಾಯಿ, ಬೆಂಡೆ ಇತ್ಯಾದಿ

- ಮಳೆ ಬಂದಿರುವ ಕಡೆ ರೈತರು ಇಳಿಜಾರಿಗೆ ಅಡ್ಡಲಾಗಿ ಮಾಗಿ ಉಳುಮೆ ಮಾಡಬೇಕು ಇದರಿಂದ ನೀರು ಇಂಗುವಿಕೆ ಹೆಚ್ಚಾಗುತ್ತದೆ ಮತ್ತು ಮಣ್ಣಿನ ಸವಕಳ ಕಡಿಮೆಯಾಗುತ್ತದೆ.
- ದ್ವಿದಳ ಧಾನ್ಯಗಳನ್ನು ಬಿತ್ತನೆ ಮಾಡುವಾಗ ರೈತರು ಬೀಜಗಳನ್ನು ರೈಜೋಬಿಯಂ ಸೂಕ್ಷ್ಮಾಣು ಜೀವಿಗಳಿಂದ ಉಪಚರಿಸಬೇಕು (೨೦ ಗ್ರಾಂ / ಕೆ.ಜಿ.). ಬಿತ್ತನೆ ಮಾಡುವಾಗ ಏಕದಳ ಧಾನ್ಯದ ಬೀಜಗಳಿಗೆ ಅಝೋಸ್ಪಿರಿಲಮ್ + ಪಿಎಸ್‌ಬಿ ಹಾಗೂ ದ್ವಿದಳ ಧಾನ್ಯದ ಬೀಜಗಳಿಗೆ ರೈಝೋಬಿಯಮ್ + ಪಿಎಸ್‌ಬಿಯಿಂದ ಉಪಚಾರ ಮಾಡಿ ಬಿತ್ತಬೇಕು.

✓ ಕೋವಿಡ್–19 ವೈರಾಣುವಿನ ನಿಯಂತ್ರಣಕ್ಕಾಗಿ ರೈತರು ವಿಶ್ರಾಂತಿ ಸಮಯದಲ್ಲಿ, ಆಹಾರ ಸೇವನೆಯ ಸಂದರ್ಭದಲ್ಲಿ, ಕೃಷಿ ಉತ್ಪನ್ನಗಳನ್ನು ಸಂಗ್ರಹಿಸುವಾಗ, ಇಳಿಸುವಾಗ/ಹೊತ್ತೊಯ್ಯು ಅಡಕಿಸುವಾಗ ಹೀಗೆ ಪ್ರತಿ ಹಂತದಲ್ಲೂ ಸುರಕ್ಷತಾ ದೃಷ್ಟಿಯಿಂದ ವ್ಯಕ್ತಿಯಿಂದ ವ್ಯಕ್ತಿಗೆ 3–4 ಅಡಿಗಳ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು.

| | |
|---|---|
| ಜಾನುವಾರಗಳು | ಮುಂಗಾರು ಮಳೆ ಪ್ರಾರಂಭವಾಗುವದಕ್ಕೆ ಮೊದಲು, ಎಲ್ಲ ಜಾನುವಾರುಗಳಿಗೆ ಜಂತು ನಾಶಕ ಔಷಧಿ ಹಾಗೂ ಕಾಲು ಮತ್ತು ಬಾಯಿ ಬೇನೆ , ಚಪ್ಪೆ ಬೇನೆಗೆ ಮುನ್ನೆಚ್ಚರಿಕೆ ಕ್ರಮವಾಗಿ ಸೂಕ್ತ ಚುಚ್ಚುಮದ್ದನ್ನು ಹಾಕಿಸಬೇಕು. ಆಡು ಮತ್ತು |

| | |
|---|---|
| | ಕುರಿಗಳಿಗೆ ಎಂಟರೊಟಾಕ್ಸೀಮಿಯಾ ರೋಗ ನಿರೋಧಕ ಹಾಕಿಸಬೇಕು. |

ಹೆಚ್ಚಿನ ಮಾಹಿತಿಗಾಗಿ ರೈತರು ದೂರವಾಣಿ ಮೂಲಕ ಡಾ||.ಪಿ,ಪ್ರಕಾಶ್, ಹಿರಿಯ ಕ್ಷೇತ್ರ ಅಧೀಕ್ಷಕರು/ ಶ್ರೀ.ಎನ್.ನರೇಂದ್ರಬಾಬು, ಸಹ ಸಂಶೋಧಕರು, ದೂರವಾಣಿ ಸಂಖ್ಯೆ. 9449869914/08212591267/9343532154ರವರನ್ನುಸಂಪರ್ಕಿಸಬಹುದು.

ಕೃಷಿ ಹವಾಮಾನ ಕ್ಷೇತ್ರ ವಿಭಾಗ,
ನಾಗನಹಳ್ಳಿ, ಮೈಸೂರು